OS 166 /2010 PW-1

ದಿನಾಂಕಃ **17-04-2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಹೆಚ್ ಎನ್ ವಕೀಲರಿಂದಃ</u>

1. ನನ್ನ ಸ್ವಂತ ಊರು ರಘುವನಹಳ್ಳಿ ಎಂದರೆ ಸರಿ. ನಾನು ಪ್ರಸ್ತುತ ಮಧುಗಿರಿಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ರಘುವನಹಳ್ಳಿ ಗ್ರಾಮದಲ್ಲಿ ನನಗೆ ಸರ್ವೇ ನಂ.ಗಳಲ್ಲಿ ಜಮೀನು ಇರುತ್ತದೆ ಎಂದರೆ ಸರಿ. ನಮ್ಮ ಜಮೀನುಗಳಿಗೆ ಹೋಗಲು ನಾವು ದಾವಾ ಸ್ವತ್ತಿನ ಮೂಲಕವೇ ಹೋಗಬೇಕಾಗುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ಕಡೆಯಿಂದಲೂ ಸಹ ಹೋಗಬಹುದು ಎಂದು ಉತ್ತರಿಸಿರುತ್ತಾರೆ. ನಮ್ಮ ಜಮೀನುಗಳಿಗೆ ಹೋಗಲು ಬೇರೆ ಎರಡೂ ಕಡೆ ದಾರಿ ಇರುತ್ತದೆ. ಸದರಿ ದಾರಿಗಳು ನಕಾಶೆಯಲ್ಲಿ ನಮೂದಾಗಿರುತ್ತವೆ.

2. ದಾವಾ ಸ್ವತ್ತುನ್ನು ಪ್ರತಿನಿತ್ಯ ನೋಡಿಕೊಂಡು ನಮ್ಮ ಜಮೀನುಗಳಿಗೆ ಹೋಗುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು ಸರ್ವೇ ನಂ.45/11 ಎ 1 ರಲ್ಲಿ ಇರುತ್ತದೆ. ಸದರಿ ಸರ್ವೇ ನಂ. ನ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತನ್ನು ನಾವು ಖರೀದಿ ಮಾಡುವ ಪೂರ್ವದಲ್ಲಿ ಅಳತೆ ಮಾಡಿಸಿರುವುದಿಲ್ಲ. ದಾವಾ ಸ್ವತ್ತನ್ನು ನಮಗೆ ಮಾರಾಟ ಮಾಡುವ ಪೂರ್ವದಲ್ಲಿ ನಮ್ಮ ಮಾರಾಟಗಾರರು ಕಾನೂನು ಬದ್ದವಾಗಿ ಅಳತೆ ಮಾಡಿಸಿರುವುದಿಲ್ಲ , ಆದರೆ ಮೌಖಿಕವಾಗಿ ದಾವಾ ಸ್ವತ್ತು ಎಲ್ಲಿ ಬರುತ್ತದೆ ಎಂದು ತೋರಿಸಿ , ನಮಗೆ ಮಾರಾಟ ಮಾಡಿರುತ್ತಾರೆ.

3. ನಮ್ಮ ಮಾರಾಟಗಾರರಾದ ಹನುಮಂತರಾಯಪ್ಪನವರ ಮನೆಯಿಂದ ಸುಮಾರು 75-80 ಅಡಿಗಳ ನಂತರ ಪ್ರತಿವಾದಿಗಳ ಸ್ವತ್ತು ಇರುತ್ತದೆ. ಪ್ರತಿವಾದಿಗಳ ಕ್ರಯಪತ್ರಕ್ಕಿಂತ ಪೂರ್ವದಲ್ಲಿ ನಮ್ಮ ಕ್ರಯಪತ್ರ ಆಗಿರುತ್ತದೆ . ನಮ್ಮ ಸ್ವತ್ತಿನ ಉತ್ತರಕ್ಕೆ ಮರುಡಪ್ಪ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ನಾವು ಪೂಪಃ 54 ಅಡಿ , ಉಃಪಃ 24 ಅಡಿ ಖರೀದಿ ಮಾಡಿರುತ್ತೇವೆ. ಕ್ರಯಪತ್ರ ಮಾಡಿ

ಕೊಟ್ಟ ದಿನದಂದು ಹನುಮಂತರಾಯಪ್ಪನವರು ಯಾವ ಯಾವ ದಾಖಲೆಗಳನ್ನು ತಂದಿದ್ದರು ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಸದರಿ ದಿನದಂದು ನಾನು ಹೋಗಿರಲಿಲ್ಲ , ನನ್ನ ಹೆಂಡತಿ ಮಾತ್ರ ಹೋಗಿದ್ದರು , ಆದ್ದರಿಂದ ಯಾವ ಯಾವ ದಾಖಲೆ ತಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಬಗ್ಗೆ ಮತ್ತು ಸರ್ವೇ ನಂ. ಬಗ್ಗೆ ಮತ್ತು ಕ್ರಯಪತ್ರದ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಕ್ರಯಪತ್ರವಾದ ನಂತರ ನಾನು ಎಲ್ಲಾ ವೈಯಕ್ತಿಕವಾಗಿ ಪರಿಶೀಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

4. ಪೂಜಾರಿ ಮೂಡ್ಲಪ್ಪ ಮತ್ತು ಪೂಜಾರಿ ತಿಮ್ಮಯ್ಯ ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾವು ಪೂಜಾರಿ ಮೂಡ್ಲಪ್ಪ ನವರ ವಿರುದ್ಧ ದಾವೆಯನ್ನು ಹೂಡಿರುತ್ತೇವೆ. ಪೂಜಾರಿ ತಿಮ್ಮಯ್ಯ ನವರ ಅಣ್ಣ ಮೂಜಾರಿ ಮೂಡ್ಲಪ್ಪ ಎಂದರೆ ನನಗೆ ಗೊತ್ತಿರುವುದಿಲ್ಲ. ಪೂಜಾರಿ ಮೂಡ್ಲಪ್ಪ ನಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿರುವುದಿಲ್ಲ. ಪೂಜಾರಿ ಮೂಡ್ಲಪ್ಪ ಈ ಪ್ರಕರಣವನ್ನು ದಾಖಲಿಸಿದ ನಂತರ ತೀರಿಕೊಂಡಿರುತ್ತಾರೆ.

5. 4 ನೇ ಪ್ರತಿವಾದಿಯನ್ನು ನಾನು ನೋಡಿರುತ್ತೇನೆ. 4 ನೇ ಪ್ರತಿವಾದಿ ರಘುವನಹಳ್ಳಿ ಗ್ರಾಮದ ಮೂಲ ನಿವಾಸಿಯಾಗಿದ್ದು , ಅವರು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರು ರಘುವನಹಳ್ಳಿ ಗ್ರಾಮದ ಮೂಲ ನಿವಾಸಿಯಾಗಿರುತ್ತಾರೆ. ರಘುವನಹಳ್ಳಿಯಲ್ಲಿ ಮನೆ ಇರುತ್ತದೆ , ಆದರೆ ಅವರು ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 4 ನೇ ಪ್ರತಿವಾದಿಯ ತಂದೆ ಹೆಸರು ತಿಮ್ಮಪ್ಪ.

6. ದಾವಾ ಸ್ವತ್ತನ್ನು ನಾವು 1989 ರಲ್ಲಿ ಖರೀದಿ ಮಾಡಿರುತ್ತೇವೆ. ನಾವು ಖರೀದಿ ಮಾಡಿರುವ ಸ್ವತ್ತು ಭೂ-ಪರಿವರ್ತನೆಯಾಗಿರುವಂತಹ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿ. ನಾವು ಖರೀದಿ ಮಾಡಿರುವಂತಹ ಸ್ವತ್ತಿಗೆ 2017-18 ರಲ್ಲಿ ಕಲ್ಲಿನ ಕಾಂಪೌಂಡ್ ಕಟ್ಟಿಕೊಂಡಿರುತ್ತೇನೆ. ಕಲ್ಲಿನ ಕಾಂಪೌಂಡ್ ಮಧ್ಯೆ ½ ಭಾಗದಲ್ಲಿ ಶೆಡ್ ನ್ನು ಹಾಕಿಕೊಂಡಿರುತ್ತೇನೆ. ನಮ್ಮ ಸ್ವತ್ತಿನ ಪೂರ್ವ ದಿಕ್ಕಿಗೆ ಇರುವಂತಹ ಪಂಚಾಯ್ತಿ ರಸ್ತೆ ಕಡೆಗೆ

ಕಬ್ಬಿಣದ ಬಾಗಿಲು ಇಟ್ಟುಕೊಂಡಿರುತ್ತೇವೆ ಎಂದರೆ ಸರಿ. ನೀವು ಖರೀದಿ ಮಾಡಿದಂತಹ ಆಸ್ತಿಗೆ ದಕ್ಷಿಣದ ಕಡೆ ಸಂಪೂರ್ಣವಾಗಿ ಕಲ್ಲಿನ ಕಾಂಪೌಂಡ್ ಹಾಕಿರುತ್ತೀರಾ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರು ಗಲಾಟೆ ಮಾಡಿದ ಕಾರಣ ಸುಮಾರು 15 ಅಡಿ ಬಿಟ್ಟು ಕಾಂಪೌಂಡ್ ಹಾಕಿಕೊಂಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಹಾಕಿರುವಂತಹ ಕಲ್ಲಿನ ಕಾಂಪೌಂಡ್ ನ ವಿಸ್ತೀರ್ಣ ಪೂಃಪಃ 50 ಅಡಿ , ಉಃದಃ 18 ರಿಂದ 20 ಅಡಿ ವಿಸ್ತೀರ್ಣ ಇರುತ್ತದೆ.

7. ನಮ್ಮ ಸ್ವತ್ತಿನ ಪೂರ್ವ ಭಾಗದ ದಕ್ಷಿಣ ಮೂಲೆಯಲ್ಲಿ ಪ್ರತಿವಾದಿಯ ಸ್ವತ್ತಿನ ಪೂರ್ವದ ಉತ್ತರ ಮೂಲೆಯಲ್ಲಿ ಸುಮಾರು 50 ವರ್ಷಗಳ ತೆಂಗಿನ ಮರ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ನಾವು ಖರೀದಿ ಮಾಡುವ ಪೂರ್ವದಲ್ಲಿ ಅಲ್ಲಿ ಮನೆ ಇರಲಿಲ್ಲ.

8. ನಮ್ಮ ಕ್ರಯಪತ್ರದಲ್ಲಿ ನಾವು ಖರೀದಿ ಮಾಡಿದಂತಹ ಸ್ವತ್ತಿನ ಪೂಃ ದಾರಿ, ಪಃ ಮಾಳಮ್ಮ ನಾಗರಾಜು ರವರ ಜಮೀನು , ಉಃ ಹನುಮಂತರಾಯಪ್ಪ ರವರ ಸ್ವತ್ತು , ದಃ ಪೂಜಾರಿ ತಿಮ್ಮಪ್ಪನವರ ಜಮೀನು ಎಂದು ನಮೂದು ಮಾಡಿರುತ್ತಾರೆ. ಪ್ರತಿವಾದಿಗಳು ಸುಮಾರು 40 ರಿಂದ 50 ವರ್ಷಗಳ ಹಿಂದೆ ಮನೆ ಕಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

9. ನೀವು ಎಷ್ಟು ದಿನಕ್ಕೆ ಒಮ್ಮೆ ದಾವಾ ಸ್ವತ್ತಿನ ಕಡೆ ಹೋಗುತ್ತೀರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನಾನು 3-4 ವರ್ಷಗಳಿಂದ ಊರಿಗೆ ಹೋಗಿರುವುದಿಲ್ಲ , ನನ್ನ ಹೆಂಡತಿ ಹೋಗಿತ್ತಿರುತ್ತಾಳೆ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿಯ ಮನೆಯ ಪೂರ್ವದ ಉತ್ತರ ದಿಕ್ಕಿಗೆ ಬಚ್ಚಲ ಮನೆ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. 2018 ರಲ್ಲಿ ನಾವು ಖರೀದಿ ಮಾಡಿದ ಸ್ವತ್ತಿಗೆ ಕಲ್ಲಿನ ಕಾಂಪೌಂಡ್ ಹಾಕಿದ ದಿನದಂದು ಪ್ರತಿವಾಗಳು ಮನೆ ಕಟ್ಟಿದ್ದರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

10. ಪ್ರತಿವಾದಿಗಳು ನಮ್ಮ ಸ್ವತ್ತಿನಲ್ಲಿ ಪೂಃಪಃ54 ಅಡಿ , ಉಃದಃ14 ಅಡಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಸದರಿ ವಿಚಾರ ಅಳತೆ ಮಾಡಿದ ನಂತರ ನನಗೆ ಗೊತ್ತಾಗಿರುತ್ತದೆ. ಸದರಿ ಅಳತೆಯನ್ನು ಮೇಲ್ಮನವಿ ನ್ಯಾಯಾಲಯದ ಆದೇಶದಂತೆ ಮಾಡಿರುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ